ಫ್ಯಾಕ್ಸ್ : 080-23332521 ದೂರವಾಣಿ : 080-23332521/23330153(259)

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಡಳಿತಾಧಿಕಾರಿಗಳ ಕಛೇರಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು - 560 065

ಸಂಖ್ಯೆ: ಆಕ/ಸಾ.ವಿ-2/ಕೋವಿಡ್-19/ಓಮೈಕ್ರಾನ್/2021-22 ದಿನಾಂಕ: 05-01-2022

## ಸುತ್ತೋಲೆ

**ವಿಷಯ:** ರಾಜ್ಯದಲ್ಲಿ ಕೋವಿಡ್-19/ಓಮೈಕ್ರಾನ್ ವೈರಾಣು ಅತೀ ವೇಗವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸರ್ಕಾರದ ಮಾರ್ಗಸೂಚಿ - ಕುರಿತು.

**ಉಲ್ಲೇಖ:**
1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ, ಕರ್ನಾಟಕ ಸರ್ಕಾರ ಸಚಿವಾಲಯ, ಬಹು ಮಹಡಿಗಳ ಕಟ್ಟಡ ಬೆಂಗಳೂರುರವರ ಸುತ್ತೋಲೆ ಸಂಖ್ಯೆ:RD 158 TNR 2020ರ ದಿನಾಂಕ: 04-01-2022
2. ದಿನಾಂಕ: 5-1-2022ರಂದು ನಡೆದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಭೆಯ ನಡಾವಳಿಗಳು
3. ಕುಲಪತಿಗಳು, ಕೃ.ವಿ.ವಿ., ಗಾಕೃವಿಕೇ, ಬೆಂಗಳೂರುರವರ ಅನುಮೋದನೆಯ ದಿನಾಂಕ:05-01-2022

><<>><<>><

ರಾಜ್ಯದಲ್ಲಿ ಕೋವಿಡ್-19/ಓಮೈಕ್ರಾನ್ ವೈರಾಣು ಅತೀ ವೇಗವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ, ಕರ್ನಾಟಕ ಸರ್ಕಾರರವರು ದಿನಾಂಕ: 04-01-2022ರ ಸುತ್ತೋಲೆ ಸಂಖ್ಯೆ:RD 158 TNR 2020 ಉಲ್ಲೇಖ-1ರ ನಿರ್ಬಂದಿತ ಕ್ರಮಗಳನ್ನು ಪಾಲಿಸಲು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಸದರಿ ಮಾರ್ಗಸೂಚಿಗಳು ದಿನಾಂಕ: 5/1/2022ರ ರಾತ್ರಿ 10.00 ಗಂಟೆಯಿಂದ ದಿನಾಂಕ: 19/1/2022ರ ಬೆಳಗ್ಗೆ 5.00 ಗಂಟೆಯವರೆಗೆ ಜಾರಿಯಲ್ಲಿರುತ್ತವೆ.

ಸರ್ಕಾರದ ದಿನಾಂಕ: 4/1/2022ರ ಮಾರ್ಗಸೂಚಿಗಳನ್ವಯ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಈ ಕೆಳಗಿನಂತೆ ನಿರ್ಬಂಧಿತ ಮಾರ್ಗಸೂಚಿಗಳನ್ನು ಈ ಮೇಲೆ ಸೂಚಿಸಿದ ಅವಧಿಗೆ ಸೀಮಿತವಾಗಿರುವಂತೆ ಆದೇಶಿಸಿರುತ್ತದೆ:

1. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಆವರಣಗಳ ಕಛೇರಿಗಳು ಹಾಗೂ ಮಹಾವಿದ್ಯಾಲಯಗಳು ವಾರದ 5 ದಿನಗಳು ಮಾತ್ರ (ಸೋಮವಾರದಿಂದ ಶುಕ್ರವಾರದ ವರೆಗೆ) ಕಾರ್ಯ ನಿರ್ವಹಿಸುವುದು.

2. ಸರ್ಕಾರವು ವಾರಾಂತ್ಯ ಅಂದರೆ ಶುಕ್ರವಾರ ರಾತ್ರಿ 8.00 ಗಂಟೆಯಿಂದ ಸೋಮವಾರ ಬೆಳಗ್ಗೆ 5.00 ಗಂಟೆಯ ವರೆಗೆ ಕರ್ಫ್ಯೂ ಆದೇಶಿಸಿರುವ ಕಾರಣ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಆವರಣಗಳ ಕಛೇರಿಗಳು ಹಾಗೂ ಮಹಾವಿದ್ಯಾಲಯಗಳು ಮುಚ್ಚಲ್ಪಟ್ಟಿರುತ್ತವೆ (**ಹೊರತುಪಡಿಸಿ : ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಕ್ಷೇತ್ರದಲ್ಲಿ ಜಾನುವಾರುಗಳ ಆರೈಕೆಗಾಗಿ/ಸಂಶೋಧನೆ/ಪ್ರಯೋಗ ಮುಂತಾದ ಅತ್ಯಾವಶ್ಯಕ ಕಾರ್ಯಚಟುವಟಿಕೆಗಳಿಗೆ ಅವಶ್ಯಕವಾದ ಸಿಬ್ಬಂದಿಗಳು ಮಾತ್ರ ಸಂಬಂಧಪಟ್ಟ ಅಧಿಕಾರಿಯ ನಿರ್ದೇಶನದಂತೆ ಕಾರ್ಯ ನಿರ್ವಹಿಸುವುದು**).

3. ಬೆಂಗಳೂರು ನಗರ ಜಿಲ್ಲೆ ಅಂದರೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಗಾಕೃವಿಕೇ ಆವರಣದಲ್ಲಿರುವ ಕೃಷಿ ಮಹಾವಿದ್ಯಾಲಯದಲ್ಲಿ ತರಗತಿಗಳು ದಿನಾಂಕ 6-1-2022 ರಿಂದ 19-01-2022ರವರೆಗೆ ಮುಚ್ಚಲ್ಪಟ್ಟಿರುತ್ತವೆ.

4. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಹೊರಗಿನ ಆವರಣದ ಎಲ್ಲಾ ಮಹಾವಿದ್ಯಾಲಯಗಳಲ್ಲಿ ವಾರಾಂತ್ಯ ಹೊರತುಪಡಿಸಿ ಎಂದಿನಂತೆ ತರಗತಿಗಳು ತೆರೆದಿರುತ್ತವೆ.

5. ಕೃವಿವಿ(ಬೆಂ)ನ ಎಲ್ಲಾ ಅಧಿಕಾರಿಗಳು ಹಾಗೂ ಆಯಾ ಕೇಂದ್ರಗಳ ಮುಖ್ಯಸ್ಥರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಅಗತ್ಯ ಸೇವೆಗಳಿಗೆ ಘೋಷಿತ ಅವಧಿಯಲ್ಲಿ ಅಡಚಣೆಯಾಗದಂತೆ ತಮ್ಮ ಹಂತದಲ್ಲಿ ಸೂಕ್ತ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

ಪು.ತಿನೋ

6. ವಿಶ್ವವಿದ್ಯಾನಿಲಯದ ಎಲ್ಲಾ ಸಿಬ್ಬಂದಿಗಳು ಕಾರ್ಯಸ್ಥಳದಲ್ಲಿ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವುದು.(ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಬಳಸುವುದು, ಸಾಮಾಜಿಕ ಅಂತರ ಕಾಪಾಡುವುದು ಇತ್ಯಾದಿ)

ಆದೇಶದ ಮೇರೆಗೆ

ಆಡಳಿತಾಧಿಕಾರಿಗಳು

**ಪ್ರತಿಗಳು**

1. ಎಲ್ಲಾ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
2. ವಿಶೇಷಾಧಿಕಾರಿಗಳು, ಕೃಷಿ ಮಹಾವಿದ್ಯಾಲಯ, ಚಾಮರಾಜನಗರ
3. ವಿಶೇಷಾಧಿಕಾರಿಗಳು, ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯ, ಗಾಕೃವಿಕೇ, ಬೆಂಗಳೂರು.
4. ಎಲ್ಲಾ ಸಹ ಸಂಶೋಧನಾ ನಿರ್ದೇಶಕರುಗಳು, ಪ್ರಾಂತೀಯ ಕೇಂದ್ರಗಳು
5. ಕೋಆರ್ಡಿನೇಟರ್ & ನೋಡಲ್‌ಆಫೀಸರ್, ಪಿ.ಪಿ.ಎಂ.ಸಿ., ಕುಲಪತಿಗಳ ಕಛೇರಿ, ಗಾ.ಕೃ.ವಿ.ಕೇ., ಬೆಂಗಳೂರು
6. ಮುಖ್ಯಸ್ಥರು, ಎ.ಕೆ.ಎಂ.ಯು. ಕೃವಿವಿ, ಗಾಕೃವಿಕೇ, ಬೆಂಗಳೂರು – ಕೃಷಿ ವಿಶ್ವವಿದ್ಯಾನಿಯಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಕೋರಲಾಗಿದೆ–AKMU @ UAS Bangalore.edu.in
7. ಎಲ್ಲಾ ಕೃಷಿ ವಿಜ್ಞಾನ ಕೇಂದ್ರಗಳ ಕಾರ್ಯಕ್ರಮ ಸಂಯೋಜಕರು/ಎಲ್ಲಾ ವಲಯ ಕೃಷಿ ಸಂಶೋಧನಾ ಕೇಂದ್ರಗಳು.
8. ಎಲ್ಲಾ ಹಿರಿಯ ಕ್ಷೇತ್ರಾಧೀಕ್ಷಕರುಗಳು ಹಾಗೂ ಕ್ಷೇತ್ರಾಧೀಕ್ಷಕರುಗಳು, ಪ್ರಾಂತೀಯ ಸಂಶೋಧನಾ ಕೇಂದ್ರಗಳು/ ಕೃಷಿ ಸಂಶೋಧನಾ ಕೇಂದ್ರಗಳು/ ಕೃವಿವಿಯ ಎಲ್ಲಾ ಪ್ರಾಯೋಜನೆಗಳು
9. ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿಗಳು, ಬೋಧಕರ ಸಂಘ, ಕೃ.ವಿ.ವಿ., ಗಾ.ಕೃ.ವಿ.ಕೇ., ಬೆಂಗಳೂರು
10. ಪ್ರಧಾನ ಕಾರ್ಯದರ್ಶಿಗಳು, ನೌಕರರ ಸಂಘ, ಕೃ.ವಿ.ವಿ., ಗಾ.ಕೃ.ವಿ.ಕೇ., ಬೆಂಗಳೂರು
11. ಕುಲಪತಿಗಳ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃ.ವಿ.ವಿ., ಗಾ.ಕೃ.ವಿ.ಕೇ.,ಬೆಂಗಳೂರು
12. ಕಛೇರಿ ಕಡತಕ್ಕೆ